ಸ್ವಲ್ಪಮಟ್ಟಿಗೆ ಮಳೆ ಬರಬಹುದು ಎಂದು ಆಸೆ ಇದೆ. ನಿನ್ನೆ ಸಾಯಂಕಾಲದಿಂದ ನಮ್ಮ ಕಡೆ ಆಗಿರುವ ಮಳೆಯಿಂದ ಈ ಭಾವನೆ ಬಂದಿದೆ.

ಅಧ್ಯಕ್ಷರು: ಮಳೆ ಪ್ರಾರಂಭವಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಚರ್ಚೆ ಆರಂಭವಾಗುವುದಕ್ಕೆ ಮುಂಚೆಯೇ ಹೇಳಿದ್ದೆ. ಇದನ್ನು ಕೊನೆಗೆ ಶಾಸನಸಭೆ ಮುಗಿಯುವುದಕ್ಕೆ ಮುನ್ನ ಚರ್ಚೆ ಮಾಡೋಣ, ಆಗ ಸಾಕಷ್ಟು ಮಾಹಿತಿ ಇರುತ್ತದೆ ಎಂದು ಹೇಳಿದ್ದೆ. ಆದರೂ ಚರ್ಚೆ ಮಾಡಿದ್ದಾರೆ. ಆದರೆ ಈ ಸರ್ಕಾರ ಮಾಡಿರತಕ್ಕಂಥ ಕೆಲಸದ ಬಗ್ಗೆ ಮೆಚ್ಚುಗೆ ಬೇಡ, ಅಥವಾ ಅವರಿಗೆ ಕ್ರೆಡಿಟ್ ಕೊಡುವುದಕ್ಕೆ ಇಚ್ಛೆಯಿಲ್ಲದಿದ್ದರೆ ಪರವಾಗಿಲ್ಲ. ಆದರೆ ಅವರು ಹೇಳಿದ್ದಷ್ಟೇ ಕಡತಕ್ಕೆ ಹೋಗಿ ಸರ್ಕಾರದಿಂದ ಉತ್ತರ ಬರಲಿಲ್ಲ ಎನ್ನತಕ್ಕಂಥ ಲೋಪ ಇರಬಾರದು ಎನ್ನತಕ್ಕಂಥ ದೃಷ್ಟಿಯಿಂದ ಈ ಸರ್ಕಾರದಲ್ಲಿ ಯಾವ ಭಿನ್ನಮತವೂ ಇಲ್ಲ, ನಾವು ಎಲ್ಲರ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಮುಂದೆಯೂ ಹೀಗೆ ಕೆಲಸ ಮಾಡುತ್ತೇವೆ. ರಾಜಕೀಯ ದೃಷ್ಟಿಯಿಂದ ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅವೆಲ್ಲವೂ ಆಧಾರರಹಿತ. ಇದು ಕಡತದಲ್ಲಿ ಇರಲಿ ಎನ್ನುವ ಕಾರಣಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಈಗ ಬರ ಮತ್ತು ಬೆಳೆ ವಿಮೆ ವಿಷಯದ ಬಗ್ಗೆ ಚರ್ಚೆ ಮುಗಿಯಿತು. ಇನ್ನು ವತ್ತೀಯ ಕಾರ್ಯಕಲಾಪಗಳನ್ನು ನಾವು ಪ್ರಾರಂಭ ಮಾಡಬೇಕು.

ಶ್ರೀ ಎಲ್. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):- ಒಂದು ನಿಮಿಷ. ನಾನು ಇಲ್ಲದೇ ಇದ್ದಾಗ ಸದನದಲ್ಲಿ ಮಾನ್ಯ ಕರಡಿ ಸಂಗಣ್ಣನವರು ಶೂನ್ಯವೇಳೆಯಲ್ಲಿ ಕೊಪ್ಪಳದ ಪ್ರಕರಣದ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು: ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ.....

ಅಧ್ಯಕ್ಷರು: ತಾವು ಏನಾದರೂ ಎಕ್ಸ್‌ಟ್ರಾ ಹೇಳುವುದು ಇದ್ದರೆ ಹೇಳಿ. ಮುಖ್ಯಮಂತ್ರಿಗಳು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

(ಊ) ಕೊಪ್ಪಳದ ಘಟನೆಯ ಬಗ್ಗೆ ಮಾನ್ಯ ಗೃಹಸಚಿವರಿಂದ ಉತ್ತರ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಎಕ್ಸ್‌ಟ್ರಾ ಹೇಳುವುದು ಏನು ಇಲ್ಲ. ಆದರೆ ಅಲ್ಲಿ ನಡೆದಂಥ ಘಟನೆ ಬಗ್ಗೆ ನನ್ನ ಹೇಳಿಕೆಯನ್ನು ಸುಮ್ಮನೆ ಓದಿ ಹೇಳುತ್ತೇನೆ. ತಮ್ಮ ಗಮನಕ್ಕೆ ಇದು ಬರಲಿ ಅಂತ ಹೇಳುತ್ತೆನೆ.

ದಿನಾಂಕ 9.7.2001ರಂದು ಬೆಳಿಗ್ಗೆ 6-30 ಗಂಟೆಗೆ ಕೊಪ್ಪಳ ಶಹರ ಪೋಲೀಸ್ ಠಾಣೆಯಿಂದ ದೂರವಾಣಿ ಕರೆಬಂದಿದ್ದು ಅದರಂತೆ ರಾತ್ರಿ ಡಾ।। ಬಿ.ಆರ್. ಅಂಬೇಡ್ಕರ್ ಮೂರ್ತಿಗೆ ಹಸಿರು ಬಣ್ಣದ ಟೋಪಿಯನ್ನು ತೊಡಿಸಿದ್ದು, ಇದನ್ನು ಪ್ರತಿಭಟಿಸಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಡಾ।। ಬಿ.ಆರ್. ಅಂಬೇಡ್ಕರ್ ಪ್ರತಿಮೆ ಎಂದೆ ಜಮಾಯಿಸಿದ್ದಾರೆ ಎಂದು ತಿಳಿಸಿದ್ದರ ಮೇರೆಗೆ ಸಿ.ಪಿ.ಐ. ಕೊಪ್ಪಳ (ಗ್ರಾಮಾಂತರ) ಅವರು ಕೂಡಲೇ ಸ್ಥಳಕ್ಕೆ

ಧಾವಿಸಿ ಅಲ್ಲಿ ನರೆದಿದ್ದಂಥ ಜನಸಮೂಹಕ್ಕೆ ಶಾಂತಿಯನ್ನು ಕಾಪಾಡಲು ವಿನಂತಿಸಿಕೊಂಡಿದ್ದಾರೆ. ಸುಮಾರು 300 ರಿಂದ 400 ಜನ ಡಾ।। ಬಿ.ಆರ್. ಅಂಬೇಡ್ಕರ್ ಪ್ರತಿಮೆ ಮುಂದೆ ಬೆಳಿಗ್ಗೆ 7 ರಿಂದ 9 ಗಂಟೆವರೆಗೆ ಧರಣಿ ಸತ್ಯಾಗ್ರಹ ಆಚರಿಸಿ ಆರೋಪಿತರನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ. ಧರಣಿ ನಡೆಸುತ್ತಿದ್ದ ಸಮಯದಲ್ಲಿ ಕೆಲವು ದಲಿತ ಕಾರ್ಯಕರ್ತರು ಪೇಟೆಯ ಒಳಗಡೆ ಹೋಗಿ ಅಂಗಡಿ-ಮುಗ್ಗಟ್ಟುಗಳನ್ನು ಬಲವಂತದಿಂದ ಮುಚ್ಚುವಂತೆ ಆಗ್ರಹಿಸಿದರು. ಆಗ ಅಂಗಡಿಗಳ ಮಾಲೀಕರು ಗಡಿಯಾರ ಟವರ್ ವೃತ್ತದ ಬಳಿ ಸೇರಿದರು. ಕೇವಲ ಅರ್ಧ ಗಂಟೆಯೊಳಗೆ ಸುಮಾರು ಮೂರು ಸಾವಿರದಿಂದ ನಾಲ್ಕು ಸಾವಿರ ಜನ ನೆರೆದು ಬಲವಂತವಾಗಿ ಅಂಗಡಿ-ಮುಂಗಟ್ಟುಗಳನ್ನು ಮುಚ್ಚಿಸಿದ್ದರ ವಿರುದ್ಧ ಪ್ರತಿಭಟಿಸಿದರು. ತಕ್ಷಣ ಎಸ್.ಪಿ. ಕೊಪ್ಪಳ ಜಿಲ್ಲೆ ಹಾಗೂ ಸ್ಥಳೀಯ ಪೋಲೀಸ್ ಅಧಿಕಾರಿಗಳು ಚಾಕಚಕ್ಯತೆಯಿಂದ ಪರಿಸ್ಥಿತಿಯನ್ನು ನಿಯಂತ್ರಿಸಿದ್ದರಿಂದ ಯಾವುದೇ ಅಹಿತಕರ ಘಟನೆಗೆ ಆಸ್ಪದ ಆಗಲಿಲ್ಲ.

6.10 ಪಿ.ಎಂ

ಬಂದ್‌ಅನ್ನು ಪ್ರತಿಭಟಿಸಲು ಜಮಾಯಿಸಿದ್ದ ಗುಂಪು ಒಂದು ಹಂತದಲ್ಲಿ ಡಾ।। ಅಂಬೇಡ್ಕರ್ ನಗರದಲ್ಲಿ ದಲಿತರು ಜಮಾಯಿಸಿದ್ದ ಸ್ಥಳಕ್ಕೆ ನುಗ್ಗಲು ಯತ್ನಿಸಿದರು. ಈ ಪ್ರಯತ್ನವನ್ನು ಸ್ಥಳೀಯ ಪೋಲೀಸರು ಚಾಕಚಕ್ಯತೆಯಿಂದ ವಿಫಲಗೊಳಿಸಿ ಮತ್ತೊಂದು ಗುರುತರವಾದ ಘಟನೆ ನಡೆಯುವುದನ್ನು ತಪ್ಪಿಸಿದ್ದರು. ಆದರೂ ಸಣ್ಣಪುಟ್ಟ ಕಲ್ಲು ತೂರಾಟ ಜರುಗತಕ್ಕ, ಚಹಾ ಅಗಂಡಿ ಹಾಗೂ ಸ್ಟಾರ್ ಚಿತ್ರಮಂದಿರದ ಪರದೆ ಮತ್ತು ಪ್ರೊಜೆಕ್ಟರ್ ಹಾಗೂ ಸೌಂಡ್ ಬಾಕ್ಸ್‌ಗಳನ್ನು ಕಿಡಿಗೇಡಿಗಳು ಜಖಂಗೊಳಿಸಿದರು. ವಿಷಯ ತಿಳಿದ ತಕ್ಷಣ ಈಶಾನ್ಯ ವಲಯ ಗುಲ್ಬರ್ಗಾ (ಐ.ಜಿ.ಪಿ) ರವರು ಹೆಚ್ಚುವರಿ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಧಾವಿಸಿ ನಗರದಲ್ಲಿ ಗಸ್ತು ಮಾಡಿ ವಿವಿಧ ಗುಂಪುಗಳ ಜನರೊಂದಿಗೆ ಭೇಟಿ ಮಾಡಿ ಅವರ ಭಾವನೆಗಳನ್ನು ತಿಳಿದುಕೊಂಡು ತಪ್ಪಿತಸ್ಥರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಜರುಗಿಸುವ ಆಶ್ವಾಸನೆಯನ್ನು ನೀಡಿ ಶಾಂತಿ ಸುವ್ಯವಸ್ಥೆ ಕಾಪಾಡುವಂತೆ ವಿನಂತಿಸಿದರು. ಅಂಗಡಿ ಮುಂಗಟ್ಟುಗಳನ್ನು ಬೆಳಿಗ್ಗೆ ಮುಚ್ಚಿದ್ದು ಸಂಜೆ ತಮ್ಮ ಎಂದಿನ ವಹಿವಾಟುಗಳನ್ನು ಪ್ರಾರಂಭಿಸಿದ್ದು ವಾಹನ ಸಂಚಾರ ಸಾಮಾನ್ಯವಾಗಿತ್ತು. ಪರಿಸ್ಥಿತಿ ಶಾಂತವಾಗಿದೆ. ಸೂಕ್ತ ಪೋಲೀಸ್ ಬಂದೋಬಸ್ತು ಮುಂದುವರೆದಿದೆ. ಐ.ಜಿ.ಪಿ. ಈಶಾನ್ಯವಲಯದವರು ಕೊಪ್ಪಳದಲ್ಲಿ ವಾಸ್ತವ್ಯ ಹೂಡಿ ಬಂದೋಬಸ್ತ್‌ನ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಾರೆ. ಹೆಚ್ಚುವರಿ ಪೋಲೀಸ್ ಸಿಬ್ಬಂದಿಯನ್ನು ಗದಗ್ ಮತ್ತು ಹೊಸಕೋಟೆಯಿಂದ ಬಂದೋಬಸ್ತ್‌ಗಾಗಿ ಕಳುಹಿಸಿಕೊಡಲಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಕೊಪ್ಪಳ ಟೌನ್ ಪೋಲೀಸ್ ಠಾಣೆಯಲ್ಲಿ ಐ.ಪಿ.ಸಿ. ಪ್ರಕಾರ ಈ ಕೆಳಕಂಡ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಮೊಕದ್ದಮೆ ಸಂಖ್ಯೆ:126:2002 ಕಲಂ 295(ಎ) ಮತ್ತು 153, ಮೊಕದ್ದಮೆ ಸಂಖ್ಯೆ: 127: 2002, ಸೆಕ್ಷನ್ 143, 147, 148, 366, 427, ರೆಡ್ ವಿತ್, 114:9 ಐ.ಪಿ.ಸಿ. ಸುಮಾರು ಒಂದು ಸಾವಿರ ರೂಪಾಯಿಗಳ ಆಸ್ತಿ ನಷ್ಟವಾಗಿರುತ್ತದೆ. ಮೊಕದ್ದಮೆ ಸಂಖ್ಯೆ 128 ಸೆಕ್ಷನ್ 143, 147, 148, 436, 427 ರೆಡ್ ವಿತ್ 149 ಐ.ಪಿ.ಸಿ. ಸುಮಾರು 25 ಸಾವಿರರೂಪಾಯಿಗಳ ಆಸ್ತಿ ನಷ್ಟವಾಗಿದೆ. ಸಂಶಯದ ಮೇಲೆ ಒಬ್ಬ ವ್ಯಕ್ತಿಯನ್ನು ದಿನಾಂಕ:9:07:2002ರಂದು ದಸ್ತಗಿರಿ ಮಾಡಲಾಗಿದ್ದು ಇನ್ನಿತರರನ್ನು ಪತ್ತೆ ಹಚ್ಚುವ ಪ್ರಯತ್ನ

ಮುಂದುವರಿದಿದೆ. ಮುಂಜಾಗ್ರತ ಕ್ರಮವಾಗಿ ಕಲಂ 144 ಸಿ.ಆರ್. ಪಿ.ಸಿ. ಪ್ರಕಾರ ಪ್ರತಿಬಂಧಕಾಜ್ಞೆಯನ್ನು ದಿನಾಂಕ: 12:03:2002 ರಂದು ಜಾರಿಗೊಳಿಸಲಾಗಿದೆ. ಅಲ್ಲಿ ಸದ್ಯಕ್ಕೆ ಪರಿಸ್ಥಿತಿ, ವಾತಾವರಣ ಶಾಂತವಾಗಿದೆ. ಆದರೆ ಇದೇ ಸಂದರ್ಭದಲ್ಲಿ ಅನೇಕ ಬೇರೆ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಕೂಡ ಪ್ರತಿಭಟನೆಗಳು ನಡೆದಿದೆ. ಅದಕ್ಕಾಗಿ ನಾನು ಈ ಸದನದ ಮುಖಾಂತರ ಅವರನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಯಾವ ಘಟನೆ ಕೊಪ್ಪಳದಲ್ಲಿ ಆಗಿದೆ ಅದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ನಾವು ಒಬ್ಬರನ್ನು ಬಂಧಿಸಿದ್ದೇವೆ. ಸಂಶಯಕ್ಕೆ ಒಳಪಟ್ಟಿರುವ ಇನ್ನಿತರರನ್ನು ಪತ್ತೆ ಹಚ್ಚಿ ಅಂಥವರಿಗೂ ಸರ್ಕಾರ ವಿಚಾರಣೆ ಮಾಡುತ್ತದೆ ಮತ್ತು ಕಠಿಣವಾದಂಥ ಕ್ರಮವನ್ನೂ ಜರುಗಿಸುತ್ತದೆ. ಆದರೆ ಈ ನೆಪದಲ್ಲಿ ಬೇರೆ ಕಡೆ ಕೂಡ ಸಾರ್ವಜನಿಕರ ಆಸ್ತಿಪಾಸ್ತಿ ಹಾಳುಮಾಡತಕ್ಕದ್ದು ಅಥವಾ ಸಾರ್ವಜನಿಕರಿಗೆ ತೊಂದರೆ ಕೊಡತಕ್ಕದ್ದು ಯಾರೂ ಕೂಡ ಮಾಡಬಾರದು ಎನ್ನತಕ್ಕ ಮನವಿಯನ್ನು ನಾನು ಮಾಡಿಕೊಳ್ಳುತ್ತೇನೆ. ಮತ್ತು ಶಾಂತಿಯ ವಾತಾವರಣವನ್ನು ಕಲ್ಪಿಸಬೇಕೆಂದು ಎಲ್ಲರನ್ನು ವಿನಂತಿಸುತ್ತೇನೆ. ವಿಶೇಷವಾಗಿ ದಲಿತ ಸಂಘರ್ಷ ಸಮಿತಿಯಾಗಲಿ ಬೇರೆ ಡಾ।। ಬಾಬಾಸಾಹೇಬ್ ಅಂಬೇಡ್ಕರ್‌ರವರ ಯಾವುದೇ ಸಂಘಟನೆಗಳಾಗಲಿ, ಡಾ।। ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಅಪಮಾನ ಮಾಡತಕ್ಕ ಪ್ರಯತ್ನಗಳು ಅಲ್ಲಲ್ಲಿ ಆಗಾಗ್ಗೆ ಆಗುತ್ತಿದೆ. ಇದನ್ನು ನಿಲ್ಲಿಸಬೇಕೆಂದು ನಾವು ಈಗಾಗಲೇ ಎಸ್.ಪಿ. ಗಳಿಗೆ ಮತ್ತು ಸಂಬಂಧಪಟ್ಟಂಥ ಡಿ.ವೈ.ಎಸ್.ಪಿ. ರವರುಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಆದರೂ ಕೂಡ ಕೆಲವು ಸಲ ಸಮಾಜದಲ್ಲಿ ಇಂಥ ಘಟನೆಗಳು ಬರುತ್ತಿದೆ. ಆದರೆ ಇದನ್ನು ನಾವು ಬಹಳ ಫರ್ಮ ಆಗಿ ಡೀಲ್ ಮಾಡಬೇಕಾಗುತ್ತದೆ. ಮತ್ತು ನಾನು ಎಚ್ಚರಿಕೆಯನ್ನೂ ಕೊಡುತ್ತಿದ್ದೇನೆ, ಯಾರು ಈ ಸಮಾಜವನ್ನು ಒಡೆದು ಆಳತಕ್ಕ ಪ್ರಯತ್ನ ಮಾಡುವುದಕೋಸ್ಕರ ಇಂಥ ಪ್ರಯತ್ನಗಳನ್ನು ಮಾಡಿ ಜಗಳ ಪ್ರಾರಂಭ ಮಾಡಬೇಕು ಮತ್ತು ಸಮಾಜವನ್ನು ಒಡೆಸಬೇಕೆಂದು ಏನು ಪ್ರಯತ್ನ ಮಾಡುತ್ತಾರೆ ಅದಕ್ಕೆ ಸರ್ಕಾರ ಬಿಡುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದೇ ನೆಪದಲ್ಲಿ ಸರ್ಕಾರಿ ಆಸ್ತಿಪಾಸ್ತಿಯನ್ನೂ ಹಾಳು ಮಾಡಬಾರದೆಂದು ಬಹಳ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಈಗ ಅಲ್ಲಿ ವಾತಾವರಣ ಶಾಂತಿಯಾಗಿದೆ. ಇದಕ್ಕಾಗಿ ಮಾನ್ಯ ಕರಡಿಸಂಗಣ್ಣನವರನ್ನೂ ಕೂಡ ಅಭಿನಂದಿಸುತ್ತೇನೆ.ಅವರು ಸ್ವತಃ ನಿನ್ನೆ ಅಲ್ಲಿ ಹೋಗಿದ್ದರು ಮತ್ತು ಅವರ ಸಮುಖದಲ್ಲೇ ಶಾಂತಿ ಸಭೆ ಅಲ್ಲಿ ನಡೆಯಿತು. ನಮ್ಮ ಐ.ಜಿ.ಪಿ. ಮತ್ತು ಎಸ್.ಪಿ. ಎಲ್ಲರೂ ಇದ್ದರು. ಆದ್ದರಿಂದ ಇದನ್ನು ಹೆಚ್ಚಾಗಿ ಬೆಳಸತಕ್ಕ ಅವಶ್ಯಕತೆ ಇಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಕೊಪ್ಪಳದ ಘಟನೆಯ ಬಗ್ಗೆ ಬಹಳ ವಿವರವಾಗಿ ಹೇಳಿದರು, ನಾವು ಬೆಳಿಗ್ಗೆಯೇ ಹೇಳಿದ ಪ್ರಕಾರ ಈ ಕೊಪ್ಪಳದ ಘಟನೆಯನ್ನು ನೋಡಿದರೆ ಅದು ಪೂರ್ವನಿಯೋಜಿತ ಎಂಬ ಸಂಶಯ ಬರುತ್ತದೆ. ಆ ರೀತಿ ಯಾರು ಸಂಚು ಹೂಡಿದ್ದಾರೆ. ಸಮಾಜದಲ್ಲಿ, ಸಮಾಜ ಸಮಾಜದ ನಡುವೆ ವರ್ಗ ಸಂಘರ್ಷವನ್ನೂ ನಿರ್ಮಾಣ ಮಾಡಲು ಯಾರು ಕಾರಣೀಭೂತರಾಗಿದ್ದಾರೆ ಅವರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಒಂದು ವಾರದ ಮೊದಲೇ ಕೊಪ್ಪಳದಲ್ಲಿ ಗಲಭೆಗಳಾಗಿದೆ. ಅಂಥ ಸಂದರ್ಭದಲ್ಲಿ ಮತ್ತೆ ಒಂದು ವಾರದಲ್ಲಿ ಈ

ಘಟನೆಯಾಗಿದೆಯೆಂದೆ ಒಂದೇ ಊರಿನಲ್ಲಿ ಈ ರೀತಿ ದ್ವೇಷಮಯವಾದ ವಾತಾವರಣವೆಂದರೆ ಅದು ಬಹಳಷ್ಟು ಅನಾಹುತವನ್ನು ಮಾಡುವಂಥದ್ದು. ಅಲ್ಲಿ ಈ ಒಂದು ಘಟನೆ ಏನಾಗಿದೆ ಅದು ಇಡೀ ರಾಜ್ಯದಲ್ಲಿ ಸ್ಪೆಡ್ ಆಗುವಂಥದ್ದಿದೆ. ಬೆಳಗಾಂನಲ್ಲಿ ಆಗಿದೆ, ಬೀದರ್, ಗುಲ್ಬರ್ಗಾಗಳಲ್ಲಿ ಆಗಿದೆ. ಈ ಮೂರ್ತಿಗೆ ಅಪಮಾನ ಮಾಡುವಂಥ ಕೆಲಸಗಳಾಗುತ್ತಿದೆ. ಹೀಗಾಗಿ ಇಲ್ಲಿಯವರೆಗೆ ನಾವು ಒಂದು ಇತಿಹಾಸವನ್ನು ತೆಗೆದುಕೊಂಡು ಈ ಹಿನ್ನೆಲೆಯಲ್ಲಿ ಇದುವರೆಗೆ ಎಷ್ಟೆಷ್ಟು ಜನರು ಇದ್ದಾರೆ, ಅವರ ಮೇಲೆ ಏನಾದರೂ ಕ್ರಮವಾಗಿದೆಯೇ ಎನ್ನುವಂಥದ್ದು, ಒಂದು ಕಡೆ ಎಲ್ಲಾದರೂ ಕೆಲವರಿಗೆ ಇಂಥ ಶಿಕ್ಷೆಯಾದರೆ ಮಾತ್ರ ಮುಂದೆ ಈ ರೀತಿ ಘಟನೆಗಳ ರಿಪಿಟೇಷನ್ ಆಗುವುದು ನಿಲ್ಲುತ್ತದೆ. ಏಕೆಂದರೆ, ಆ ಸಮಯದಲ್ಲಿ ಮಾತ್ರ ನಾವು ಚರ್ಚೆ ಮಾಡುತ್ತೇವೆ, ಕೇಸು ಹಾಕುತ್ತೇವೆ. ಆದರೆ ಇದು ಅಲ್ಲಿಗೇ ಮುಗಿಯುವುದಿಲ್ಲ. ಆದ್ದರಿಂದ ಇಂಥ ಘಟನೆಗಳಲ್ಲಿ ಎಲ್ಲೋ ಒಂದು ಕಡೆ ಅಂತಹವರಿಗೆ ಕೊನೆಯವರೆಗೂ ಶಿಕ್ಷೆ ವಿಧಿಸುವಂತೆ ನೋಡಿಕೊಂಡರೆ ಬಹುಶಃ ಇಂಥದ್ದು ರಿಪಿಟೇಷನ್ ಆಗುವಂಥದ್ದು ನಿಲ್ಲುತ್ತದೆ. ಮತ್ತೊಂದು ವಿಚಾರವೇನೆಂದರೆ, ಮೂರ್ತಿ ಪ್ರತಿಷ್ಠಾಪನೆ ಮಾಡುವಂಥದ್ದು, ಇದಕ್ಕೆ ಎಲ್ಲಾದರೂ ಏನಾದರೊಂದು ಪಾಲಿಸಿ ಮಾಡಬೇಕಾಗುತ್ತದೆ. ಇದರ ಬಗ್ಗೆ ವ್ಯಾಪಕ ಚರ್ಚೆಯಾಗಬೇಕು. ಡಾ।। ಅಂಬೇಡ್ಕರ್ ಮೂರ್ತಿ ಇರಬಹುದು, ಬಸವಣ್ಣನವರ ಮೂರ್ತಿ ಇರಬಹುದು, ಶಿವಾಜಿಯವರ ಮೂರ್ತಿ ಇರಬಹುದು, ಬಾಬು ಜಗಜೀವನ್ ರಾಮ್‌ರವರ ಮೂರ್ತಿ ಇರಬಹುದು, ಮಹಾತ್ಮಾಗಾಂಧಿಯವರ ಮೂರ್ತಿ ಇರಬಹುದು, ಏನು ರಾಷ್ಟ್ರ ನಾಯಕರಿದ್ದಾರೆ ಅವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವಂಥ ಸಂದರ್ಭದಲ್ಲಿ ಕೆಲವೊಂದು ಸ್ಥಳಗಳನ್ನು ನಿಗದಿ ಮಾಡಿದರೆ ಒಳ್ಳೆಯದು. ಎಲ್ಲ ಜನ ಸಂದಣಿ ಇರುತ್ತದೆ ಅಂಥ ಪರ್ಟಿಕ್ಯುಲರ್ ಏರಿಯಾಗಳಲ್ಲಿ ಮಾತ್ರ ಪ್ರತಿಷ್ಠಾಪನೆ ಮಾಡಬೇಕೆಂದು ಸ್ಥಳಗಳನ್ನು ನಿಗದಿ ಮಾಡಿದರೆ ಒಳ್ಳೆಯದು, ಆಗ ಇಂಥ ದುರ್ಷ್ಮಮಿಗಳಿಗೆ ಅವಕಾಶ ಸಿಗಲಾರದು. ಅದರ ಬಗ್ಗೆಯೂ ನಾವು ಚಿಂತನೆ ಮಾಡಬೇಕಾಗುತ್ತದೆ. ಆದ್ದರಿಂದ ಕೆಲವು ಸ್ಥಳಗಳನ್ನು ನಿಗದಿ ಮಾಡುವುದು ಒಳ್ಳೆಯದು, ಅದರ ಬಗ್ಗೆ ಸಹ ಚಿಂತನೆಯಾಗಲಿ ಎಂದು ನಾನು ಹೇಳಬಯಸುತ್ತೆನೆ.

ಶ್ರೀ ಪಿ.ಡಿ.ಆರ್ ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹಸಚಿವರಾದ ಖಿರ್ಗೆಯವರು ನಾನು ಬೆಳಿಗ್ಗೆ ಮಾತನಾಡುವಾಗ ಇರಲಿಲ್ಲ. ಈ ಒಂದು ಘಟನೆಯನ್ನು ಸಭಾನಾಯಕರು, ನಾವೆಲ್ಲರೂ ಪಕ್ಷಾತೀತವಾಗಿ ಖಂಡಿಸಿದ್ದೇವೆ. ನಾನು ಮಾನ್ಯ ಗೃಹ ಸಚಿವರ ಗಮನಕ್ಕೆ ತರತಕ್ಕಂಥಾದ್ದು ಏನೆಂದರೆ ಈ ಘಟನೆಯಾಗುವ ಎಂಟು ದಿವಸಗಳ ಮುಂಚೆ ಅಲ್ಲಿ ಮತ್ತೊಂದು ಘಟನೆ ನಡೆದಿದೆ. ಡಾ।। ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಮೂರ್ತಿಗೆ ಬಸವೇಶ್ವರರ ಮೂರ್ತಿಗೆ ಈ ರೀತಿ ಮೂರ್ತಿಗಳಿಗೆ ಅಪಮಾನ ಮಾಡುತ್ತಿರುವುದು ಬಹಳ ದಿನಗಳಿಂದ ವರ್ಷಗಳಿಂದ ನಡೆಯುಕೊಂಡು ಬಂದಿದೆ. ಆದರೆ ಈ ಘಟನೆ ಏಳು ದಿವಸಗಳ ಹಿಂದೆಯೇ ಪ್ರಾರಂಭವಾಗಿರತಕ್ಕದ್ದು. ಏಳು ದಿವಸಗಳ ಕಾಲ ಪೋಲೀಸ್‌ನವರು 'ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ತಾವು ದಯಮಾಡಿ ಈ ಸದನಕ್ಕೆ ತಿಳಿಸಬೇಕಾಗುತ್ತದೆ. ತಮ್ಮ ಹತ್ತಿರ ಸ್ಪೆಶಲ್ ಬ್ರಾಂಚ್ ಎಂದು ಪೋಲೀಸ್ ಸಿಬ್ಬಂದಿ ಇರುತ್ತದೆ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇಂಟಲಿಜೆನ್ಸ್ ವಿಂಗ್ ಇರುತ್ತದೆ. ಪ್ರತಿಯೊಂದು ಪೋಲೀಸ ಠಾಣೆಯ ವ್ಯಾಪ್ತಿಯಲ್ಲೂ ಸ್ಪೆಶಲ್ ಬ್ರಾಂಚ್ ಪೋಲೀಸ್‌ನವರು ಕೆಲಸ ಮಾಡುತ್ತಾರೆ. ಅದಲ್ಲದೆ ಮುಖ್ಯಮಂತ್ರಿಯವರಿಗೆ ನೇರವಾಗಿ ಮಾಹಿತಿ ಕಳುಹಿಸಲು

ಇಂಟಲಿಜೆನ್ಸ್‌ವಿಂಗ್ ಇರುತ್ತದೆ. ಅವರು ಇದನ್ನು ಪ್ರಿವೇಟಿವ್ ಆಕ್ಷನ್ ಆಗಿ ತೆಗೆದುಕೊಂಡಿದ್ದರೆ, ಇದನ್ನು ತಪ್ಪಿಸಬಹುದಾಗಿತ್ತು. ಮುಂದೆ ಏನು ಮಾಡಬೇಕು ಎಂಬ ಬಗ್ಗೆ ತಾವು ಎಚ್ಚರಿಕೆಯನ್ನು ಕೊಡತಕ್ಕದ್ದು ಮುಂತಾದವುಗಳೆಲ್ಲಾ ಇದ್ದೇ ಇದೆ. ಆದರೆ ತಮ್ಮ ಪೋಲೀಸ್ ಮೆಷಿನರಿ ಏಕೆ ಅಲರ್ಟ್ ಆಗಿ ಇರಲಿಲ್ಲ ಇದು ನಿಮ್ಮ ಫೇಲ್ಯೂರ್ ಅಲ್ಲವೇ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಕೊಪ್ಪಳ ಡಿಸ್ಟ್ರಿಕ್ಟ್ ಹೆಡ್ ಕ್ವಾಟ್ರರ್ಸ್, ಎಸ್.ಪಿ. ಅಲ್ಲೇ ಇರುತ್ತಾರೆ, ಡಿ.ವೈ.ಎಸ್.ಪಿ. ಅಲ್ಲೇ ಇರುತ್ತಾರೆ. ಇಬ್ಬರು ಮೂರು ಜನ ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಇರುತ್ತಾರೆ. ಇಷ್ಟೆಲ್ಲಾ ಸಿಬ್ಬಂದಿ ಇಟ್ಟುಕೊಂಡರೂ ಇದಕ್ಕೆ ಏಕೆ ಅವಕಾಶವಾಯಿತು? ಕಾರಣವೇನು? ಈ ಮಾಹಿತಿಯನ್ನು ದಯವಿಟ್ಟು ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಏನು ಸಲಹೆ ಕೊಟ್ಟಿದ್ದಾರೆ, ವಿಶೇಷವಾಗಿ ಡಾ।। ಬಾಬಾಸಾಹೇಬ್ ಅಂಬೇಡ್ಕರ್ ರವರ ಮೂರ್ತಿಯಾಲಿ, ಬಸವೇಶ್ವರರ ಮೂರ್ತಿಯಾಗಲಿ, ಯಾರೇ ರಾಷ್ಟ್ರೀಯ ನಾಯಕರ ಮೂರ್ತಿಗಳನ್ನು ನಾವು ಸ್ಥಾಪನೆ ಮಾಡಬೇಕಾಗಿದ್ದರೆ ಒಂದು ಒಳ್ಳೆಯ ಸ್ಥಳದಲ್ಲಿ ಮತ್ತು ಮಹತ್ವದ ಜಾಗದಲ್ಲಿ ಮಾಡತಕ್ಕದ್ದನ್ನು ಮಾಡಬೇಕು ಎಂದು ಏಕೆಂದರೆ ಅವುಗಳಿಗೆ ಕೂಡ ರಕ್ಷಣೆ ಸಿಗಬೇಕೆನ್ನತಕ್ಕಂಥ ದೃಷ್ಟಿಯಿಂದ ಸಲಹೆ ಮಾಡಿದ್ದಾರೆ. ಅದು ಖಂಡಿತವಾಗಿಯೂ ಒಪ್ಪತಕ್ಕಂಥ ಮಾತು. ಏಕೆಂದರೆ, ಈಗೇನಾಗುತ್ತಿದೆ ಎದರೆ ಗುಡಿ-ಗುಂಡಾರಗಳು, ಮಸೀದಿಗಳು ಮತ್ತು ಈ ರೀತಿಯ ಪ್ರತಿಮೆಗಳನ್ನು ಎಲ್ಲಿ ಬೇಕೋ ಅಲ್ಲಿ ಕೂಡಿಸುತ್ತಾರೆ. ಕೆಲವು ಸಲ ಜಾಗಗಳನ್ನು ಅತಿಕ್ರಮಣ ಮಾಡಿ ಉಪಯೋಗ ಮಾಡಿಕೊಳ್ಳತಕ್ಕಂಥಾದ್ದೂ ಕೂಡ ತಮಗೆ ಗೊತ್ತಿದೆ. ಹೀಗಾಗಿ ಸಮಾಜದಲ್ಲಿ ಘರ್ಷಣೆ ಮತ್ತು ಮನೆ ಮನೆಗೆ ಬೆಂಕಿ ಹಚ್ಚತಕ್ಕ ಕೆಲಸವೂ ಕೂಡ ನೆಡೆದಿದೆ. ಅದನ್ನು ನಾವು ನಿಲ್ಲಿಬೇಕಾದರೆ ಎಲ್ಲರೂ ಮನಸ್ಸು ಮಾಡಬೇಕು. ಅಂದರೆ, ಎಲ್ಲಿ ಇಂತಹ ಪ್ರತಿಮೆಗಳನ್ನು ನಿಲ್ಲಿಸಬೇಕು ಅಥವಾ ಸ್ಥಾಪನೆ ಮಾಡುವಾಗಲೇ ಅದಕ್ಕೆ ಪರ್ಮಿಷನ್ ಕೊಡುವಾಗಲೇ ಇದನ್ನು ನೋಡಬೇಕು. ಕೆಲವು ಸಲ ಒತ್ತಡಕ್ಕೆ ಮಣಿದು, ಅವರು ಮಾಡಿದ್ದನ್ನೇ ನಾವು ರೆಗ್ಯುಲರೈಸ್ ಮಾಡುತ್ತೇವೆ. ಅದಕ್ಕಾಗಿ ಇದನ್ನು ತಪ್ಪಿಸತಕ್ಕಂಥಾದ್ದು ಬಹಳ ಮುಖ್ಯ ಮತ್ತು ಇದರ ಬಗ್ಗೆ ಹೋದ ಸಲವೂ ಕೂಡ ಮಾಡನಾಡಿದ್ದೇವೆ. ಪಿ.ಡಬ್ಲ್ಯೂ.ಡಿ ಯಾಗಲೀ ಅಥವಾ ರೆವಿನ್ಯೂ ಡಿಪಾರ್ಟ್‌ಮೆಂಟಾಗಲೀ ಸಮಗ್ರವಾಗಿ ಚಿಂತಿಸಿ, ಇಂತಹ ಪ್ರತಿಮೆಗಳನ್ನು ಎಲ್ಲೆಲ್ಲಿ, ಯಾವ ಯಾವ ಸ್ಥಳದಲ್ಲಿ ಕೂಡಿಸಬಹುದು, ಯಾವ ಯಾವ ಸ್ಥಳಗಳಲ್ಲಿ ಕೂಡಿಸುವುದಕ್ಕಾಗುವುದಿಲ್ಲವೆಂಬ ಬಗ್ಗೆ ಒಂದು ನಿಗದಿ ಮಾಡಿದರೆ, ನಿಯಮ ಮಾಡಿದರೆ ಆದರಿಂದ ಸ್ವಲ್ಪ ಇಲ್ಲೀಗಲ್ ಪ್ರತಿಮೆಗಳನ್ನು ಅಲ್ಲಿ ಇಲ್ಲಿ ಕೂಡಿಸತಕ್ಕಂಥಾದ್ದನ್ನು ತಡೆಯುವುದಕ್ಕೆ ಸಾಧ್ಯವಿದೆ. ಆ ಪ್ರಯತ್ನವನ್ನು ಕೂಡ ನಾವು ಮಾಡಬೇಕಾಗುತ್ತದೆ ಮತ್ತು ಆ ದಿಕ್ಕಿನಲ್ಲಿ ನಾವು ಇದನ್ನು ಪರಿಶೀಲನೆ ಮಾಡಬೇಕಾದ ಪರಿಸ್ಥಿತಿ ಇದೆ. ಅದರ ಬಗ್ಗೆಯೂ ಕೂಡ ನಾನು ಸಂಬಂಧಪಟ್ಟ ಸಚಿವರ ಜೊತೆಯಲ್ಲಿ ಮಾತನಾಡಿ, ಇದಕ್ಕೇನಾದರೊಂದು ಕಡಿವಾಣ ಹಾಕತಕ್ಕಂಥಾದ್ದನ್ನು ಮಾಡೋಣ ಎಂಬುದು ಮತ್ತು ಇದಕ್ಕೊಂದು ಶಿಸ್ತನ್ನು ತರತಕ್ಕಂಥ ಕೆಲಸವನ್ನು ಕೂಡ ನಾವು ಮಾಡಬೇಕಾಗಿದೆ. ಅವರು ಕೊಟ್ಟಿರುವುದು ಒಳ್ಳೆಯ ಸಲಹೆ ಅದನ್ನು ನಾನು ಒಪ್ಪುತ್ತೇನೆ. ಎರಡನೆಯದು, ಈಗಾಗಲೇ ಶಾಂತಿಯನ್ನು ಕಾಪಾಡುವುದಕ್ಕೋಸ್ಕರ ಏನು ಪ್ರಯತ್ನಗಳನ್ನು ನಾವು ಮಾಡಬೇಕು ಮತ್ತು ಇದರ ಬಗ್ಗೆ

ಮುಂದಾಲೋಚನೆ ಇಟ್ಟುಕೊಂಡೇ ನಾವು ಕೆಲಸವನ್ನು ಮಾಡಬೇಕೆಂದು ತಾವು ಹೇಳಿದಿರಿ. ಖಂಡಿತರಾಗಿಯೂ ನಮ್ಮ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಆದರೆ, ಒಂದೊಂದು ಸಲ ಇಂತಹ ಅಚಾತುರ್ಯದ ಘಟನೆಗಳು ಸಮಾಜದಲ್ಲಿ ನಡೆಯುತ್ತವೆ ಮತ್ತು ಇತರೆ ರಾಜ್ಯಗಳಲ್ಲೂ ನಡೆಯುತ್ತವೆ. ಆದರೆ, ಆದಷ್ಟು ಅಂತಹ ಘಟನೆಗಳು ನಡೆಯದ ರೀತಿಯಲ್ಲಿ ನಾವು ಪ್ರಯತ್ನ ಮಾಡತಕ್ಕಂಥಾದ್ದು ಮತ್ತು ನಮ್ಮ ಇಲಾಖೆಯೂ ಪ್ರಯತ್ನವನ್ನು ಮಾಡತಕ್ಕಂಥಾದ್ದು, ಇದು ನಮ್ಮ ಕರ್ತವ್ಯ ಇದೆ. ನಾವು ಆದಷ್ಟು ಬಿಗಿ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೇವೆ. ಈಗ ಶ್ರೀಮಾನ್ಯ ಸಿಂಧ್ಯಾರವರು ಹೇಳಿದರು. ನಿಮಗೆ ಅಲ್ಲಿಂದ ಮಾಹಿತಿ ಬರುವುದಿಲ್ಲ, ನಿಮ್ಮದೇ ಒಂದು ಶಾಖೆ ಇರುತ್ತದೆ. ಮುಖ್ಯಮಂತ್ರಿಯವರ ಇಂಟೆಲಿಜೆನ್ಸ್ ವಿಂಗ್ ಇರುತ್ತದೆ ಎಂದು ಹೇಳಿದರು. ಎಲ್ಲಾ ಇರುತ್ತದೆ, ಇದೆಲ್ಲಾ ಅವರಿಗೂ ಗೊತ್ತಿದೆ. ರಿಪೋರ್ಟ್ ಎಷ್ಟರ ಮಟ್ಟಿಗೆ ಬರುತ್ತೇವೆ. ಎಷ್ಟೆಷ್ಟು ಬರುತ್ತವೆ, ಎಷ್ಟು ಪೇಜ್ ಬರುತ್ತದೆ ಎಂಬುದು ಗೊತ್ತಿದೆ. ಅದನ್ನು ನಾನು ಇಲ್ಲಿ ವಿಶ್ಲೇಷಣೆ ಮಾಡತಕ್ಕಂಥ ಅಗತ್ಯತೆ ಇಲ್ಲ. ಆದರೆ, ಅಲ್ಲಿ 7 ದಿವಸಗಳ ಹಿಂದೆ ನಡೆದಂಥ ಘಟನೆಯೇ ಬೇರೆ; ಇದೇ ಬೇರೆ, ಅಲ್ಲೊಂದು ಲಗ್ನದ ಕಾರ್ಯಕ್ರಮ, ಡಾಕ್ಟರ್ ಅಂಬೇಡ್ಕರ್‌ರವರ ಕಲ್ಯಾಣ ಮಂಟಪದಲ್ಲಿ, ಇದು ಆದನಂತರ ಇದಕ್ಕೆ ಸಂಬಂಧಪಟ್ಟಂಥಾದ್ದು ಮತ್ತು ಇದಕ್ಕೆ ಲಿಂಕ್ ಏನಾರೂ ಇದೆಯೇ ಎಂಬುದನ್ನು ಇನ್‌ವೆಸ್ಟಿಗೇಷನ್ ಮಾಡುತ್ತಾ ಇದ್ದಾರೆ. ಅದನ್ನು ನಾವು ನೋಡೋಣ. ಅಲ್ಲಿ ನಡೆದಂಥ ಕಾರ್ಯಕ್ರಮಕ್ಕೆ ಅಥವಾ ಈ ಪ್ರತಿಮೆಗೆ ಅವಮಾನ ಮಾಡಿದ್ದಕ್ಕೆ ಏನಾದರೂ ಲಿಂಕ್ ಇದೆಯೇ ಅಥವಾ ಯಾವ ಜನ ಮಾಡಿದ್ದಾರೆ, ಇದರಲ್ಲಿ ಯಾರ್ಯಾರು ಇನ್‌ವಾಲ್ವ್ ಆಗಿ ಇದ್ದಾರೆ ಎನ್ನುವುದನ್ನು ಬಹುಶಃ ವಾತಾವರಣ ತಿಳಿಯಾದ ಮೇಲೆ, ಎಲ್ಲಾ ಕಡೆ ಶಾಂತಿಯ ವಾತಾವರಣವಾದ ಮೇಲೆ ಖಂಡಿತವಾಗಿಯೂ ಇದರ ಬಗ್ಗೆ ನಮಗೆ ಮಾಹಿತಿ ದೊರಕಬಹುದು. ಆ ಮಾಹಿತಿ ಸಿಕ್ಕಿದ್ದನ್ನು ಖಂಡಿತವಾಗಿ ನಾನು ಅವರಿಗೆ ತಲುಪಿಸುತ್ತೇನೆ. ಮೂರನೆಯದಾಗಿ ವಿಶೇಷವಾಗಿ ನಾನು ಕೇಳಿಕೊಳ್ಳುವುದೇನೆಂದರೆ, ನಾವೆಲ್ಲರೂ ಸೇರಿ ಸಮಾಜದಲ್ಲಿ ಶಾಂತಿಯನ್ನು ಕಾಪಾಡುವುಕ್ಕೆ ಅಪೀಲು ಮಾಡಿಕೊಳ್ಳತಕ್ಕಂಥಾದ್ದು ಬಹಳ ಮುಖ್ಯ ಕೆಲವು ಸಲ ಏನಾಗುತ್ತದೆ, ಪ್ರಚೋದನೆಗಾಗಿ ಒಂದು ಸಂಘದವರು ಒಂದು ರೀತಿಯಾಗಿ ಪ್ರೊಟೆಸ್ಟ್ ಮಾಡಿದರೆ, ಅದಕ್ಕೆ ವಿರುದ್ಧವಾಗಿ ಇನ್ನೊಂದು ಕೊಪ್ಪಳದಲ್ಲಿ ಮಾನ್ಯ ಕರಡಿ ಸಂಗಣ್ಣನವರಿಗೆ ಗೊತ್ತಿದೆ. ದಲಿತ ಸಂಘರ್ಷ ಸಮಿತಿಯವರು ಒಂದು ಸಂಘಟನೆ ಮಾಡಿಕೊಂಡು ಮೆರವಣಿಗೆ ಹೊರಟರೆ ಅದಕ್ಕೆ ವಿರುದ್ಧವಾಗಿ ಹರಿಜನ ದೌರ್ಜನ್ಯ ವಿರೋಧಿ ಸಂಘ ಎಂದು ಒಂದು ಸಂಘಟನೆ ಮಾಡಿಕೊಂಡು ಇವರ ಮೇಲೆ ಅವರದೇ ಜಾಸ್ತಿಯಾಯಿತು ಅನ್ನತಕ್ಕಂಥ ವಾತಾವರಣವನ್ನು ಸೃಷ್ಟಿ ಮಾಡುತ್ತಿದ್ದಾರೆ. ಇದಕ್ಕೆ ಹಿನ್ನೆಲೆ ಏನು ಎಂಬುದನ್ನೂ ಕೂಡ ತಾವು ಹೇಳಿದಿರಿ. ಇದೆಲ್ಲವನ್ನೂ ನಾವು ನೋಡಬೇಕಾಗುತ್ತದೆ. ಪ್ರಚೋದನೆ ಮಾಡತಕ್ಕ ಸಂಘಸಂಸ್ಥೆಗಳು ಯಾವುವು ಇವೆ ಅಥವಾ ಯಾವ ವಿಚಾರಧಾರೆ ಜನ ಅದರಲ್ಲಿದ್ದಾರೆ ಎಂಬುದನ್ನೂ ಕೂಡ ನಾವು ನೋಡಬೇಕಾಗುತ್ತದೆ. ಇದರ ಬಗ್ಗೆ ಸಂಪೂರ್ಣವಾದ ಮಾಹಿತಿ ನನಗೆ ಬರಬಹುದು. ಆದರೆ, ಇಂತಹ ಘಟನೆ ಮತ್ತೊಮ್ಮೆ ಆಗಬಾರದ ಹಾಗೆ ನಾವು ನೋಡಿಕೊಳ್ಳಬೇಕಾಗಿದೆ. ಆ ರೀತಿ ನೋಡಿ ಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳಿ, ಅವರು ಯಾರೇ ಇರಲಿ, ಪ್ರತಿಯೊಂದು ನಗರದಲ್ಲಿ ಶಾಂತಿ ಭರವಸೆಯನ್ನು ಕಾಪಾಡಬೇಕೆಂಬ ದೃಷ್ಟಿಯಿಂದ ನಾವು ಎಲ್ಲಾ ಕ್ರಮವನ್ನು ಜರುಗಿಸುತ್ತೇವೆಂಬ ಭರವಸೆಯನ್ನು ಈ ಸದನಕ್ಕೆ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪದಲ್ಲಿ ಬೇಡಿಕೆಗಳನ್ನು ಮಂಡಿಸುತ್ತಾರೆ, ನಾಳೆ ಬೇಕಾದರೆ ಅದನ್ನು ಚರ್ಚೆಗೆ ತೆಗೆದುಕೊಳ್ಳೋಣ.

5. ವಿತ್ತೀಯ ಕಾರ್ಯಕಲಾಪ

2002-2003ನೇ ಸಾಲಿನ ಅನುದಾನ ಬೇಡಿಕೆಗಳು

ಬೇಡಿಕೆ ಸಂಖ್ಯೆ : 46 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಇಲಾಖೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,04,108.20 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,262.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ: 01 ಕೃಷಿ (ಮಲೆನಾಡು ಅಭಿವೃದ್ಧಿ ಮಂಡಳಿ ಹೊರತುಪಡಿಸಿ)

ಶ್ರೀ ವಿ.ಎಸ್. ಕೌಜಲಗಿ(ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2002ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ (ಮಲೆನಾಡು ಅಭಿವೃದ್ಧಿ ಮಂಡಳಿ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 45,844.27 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ: 02 ತೋಟಗಾರಿಕೆ

ಶ್ರೀ ಶಿವಣ್ಣ (ತೋಟಗಾರಿಕೆ ರಾಜ್ಯಸಚಿವರು):- ಮಾನ್ಯ ಅಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 9,884.10 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾಪ ಮಂಡಿಸಲ್ಪಟ್ಟಿತು